# <u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.</u>

**OS No**.59/2021

**DW**:1

**ದಿನಾಂಕ 04.02.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ವಾದಿ ಪರ ಶ್ರೀ.ಎಮ್.ಜೆ.ಐ. ವಕೀಲರಿಂದ:</u>**

ವಾದಿಯು ಈ ದಾವೆಯನ್ನು ಯಾವ ಕಾರಣಕ್ಕಾಗಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ರಾಜೇಸಾಬ ಇವರಿಗೆ ಎಷ್ಟು ಜನ ಮಕ್ಕಳು ಇದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ರಾಜೇಸಾಬ ಇವರು ಯಾವಾಗ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ರಾಜೇಸಾಬ ಇವರು ಮರಣ ಹೊಂದುವ ಒಂದು ವರ್ಷದ ಪೂರ್ವದಲ್ಲಿ ಹಾಸಿಗೆ ಹಿಡಿದಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ರಾಜೇಸಾಬ ಇವರಿಗೆ ಪ್ರಜ್ಞೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ರಾಜೇಸಾಬ ಇವರು ಮರಣ ಹೊಂದುವಾಗ ದಾವಾ ಆಸ್ತಿ ಸರ್ವೆ ನಂ.126 ವಿಸ್ತೀರ್ಣ 45 ಎಕರೆಯ ಮಾಲೀಕರು ಇದ್ದರು ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ಸಾಕ್ಷ್ಯಾಪ್ರಮಾಣ ಪತ್ರಿಕೆಯಲ್ಲಿ ರಾಜೇಸಾಬ ಈತನ ತನ್ನ ಜೀವಿತಾವಧಿಯಲ್ಲಿ ತನ್ನ ಮಕ್ಕಳಿಗೆ ವಾಟ್ನಿ ಮಾಡಿಕೊಟ್ಟಿರುತ್ತಾನೆ ಎಂದು ಬರೆದಿರುತ್ತೀರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನಗೆ ಹಿಂದಿನದು ಗೊತ್ತಿಲ್ಲವೆಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ವಾದಿ ಎಲ್ಲರೂ ಕೂಡಿ ಸಾಗುವಳಿ ಮಾಡುತ್ತಾರೆ ಎಂದರೆ ಸಾಕ್ಷಿಯು ನಮ್ಮ ಜಮೀನನ್ನು ನಾವು ಸಾಗುವಳಿ ಮಾಡುತ್ತೇವೆ ಎಂದು ನುಡಿಯುತ್ತಾರೆ.

1 ಮತ್ತು 3 ನೇ ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ತಮ್ಮ ಹೆಸರನ್ನು ದಾಖಲಿಸಿಕೊಂಡು ಅಕ್ಕ ತಂಗಿಯರಿಗೆ ಪಾಲು ಕೊಡದೇ ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. MR No.35/2003-04 Dated 12.04.2004, MR No.26, MR No.03/2011, 94/2017-18 ಇವುಗಳು ಭೋಗಸ್ ಇರುತ್ತವೆ ಎಂದರೆ ಸರಿಯಲ್ಲ. ಸದರಿ ಮ್ಯೂಟೇಶನಗಳು ವಾದಿಯ ಹಿಸ್ಸೆಗೆ ಬಂಧನಕಾರಕ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ವಾದಿಗೆ 1/9 ನೇ ಭಾಗಾಂಶ ಬರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನಮಗೆ ಗೊತ್ತಿಲ್ಲ ಆದರೆ ನಾನು ಸಾಧೀಕ್ ಅವರ ಕಡೆಯಿಂದ 3 ಎಕರೆ 20 ಗುಂಟೆಯನ್ನು 2020 ರಲ್ಲಿ ಖರೀದಿ



ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಮ್ಮ ಖರೀದಿ ಪತ್ರ, 2023 ರಿಂದ 2026 ರ ವರೆಗೆ ಆದಂತಹ ಖರೀದಿ ಪತ್ರಗಳು ವಾದಿಯ ಹಿಸ್ಸೆಗೆ ಬಂಧನಕಾರಕ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 1/9 ನೇ ಭಾಗಾಂಶ ವಾದಿಗೆ ಇರುತ್ತದೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ: ಇಲ್ಲ:</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.

ಸಹಿ/-

ಜೆ.ಎಂ.ಎಫ್.ಸಿ. ನ್ಯಾಯಾಲಯ

ಇಂಡಿ.